ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು
ಮೂಲಸೌಲಭ್ಯ ಅಭಿವೃದ್ಧಿ
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

KSIIDC

Karnataka State Industrial and
Infrastructure Development
Corporation Limited
(Government of Karnataka Undertaking)

ಉಪ್ರವ್ಯ (ಪ್ರ)(ಸಿ&ಆ)/ 970 /2020-21

ದಿನಾಂಕ: 13.11.2020

## ಕಛೇರಿ ಆದೇಶ

**ವಿಷಯ:** ನಿಗಮದ ವಿವಿಧ ವೃಂದಗಳ ಪರಿಷ್ಕೃತ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ

**ಉಲ್ಲೇಖ:** ಕಛೇರಿ ಅದೇಶದ ಸಂಖ್ಯೆ: ಉಪ್ರವ್ಯ (ಪ್ರ)(ಸಿ&ಆ)/1225/2019-20 ದಿನಾಂಕ ಜನವರಿ 06, 2020.

*******

ಮೇಲೆ ಉಲ್ಲೇಖಿಸಿರುವ ಕಛೇರಿ ಆದೇಶದ ಮೂಲಕ ನಿಗಮದ ವಿವಿಧ ವೃಂದಗಳಿಗೆ ಸಂಬಂಧಿಸಿದ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿತ್ತು. ಈ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಗೆ ಈ ಕೆಳಗಿನ ಅಧಿಕಾರಿಗಳು / ಸಿಬ್ಬಂದಿಗಳು ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ:

ಅ. ಶ್ರೀ ಆರ್ ವಿ ಭೂತಪ್ಪ
ಆ. ಶ್ರೀ ಈಶ್ವರ
ಇ. ಶ್ರೀಮತಿ ಎನ್ ಹೇಮಲತಾ
ಈ. ಶ್ರೀಮತಿ ಎಸ್ ಎನ್ ಹಂಸವೇಣಿ
ಉ. ಶ್ರೀಮತಿ ಸಾವಿತ್ರಮ್ಮ
ಊ. ಕುಮಾರಿ ಎ ವಿಶ್ವಭಾರತಿ

2. ಮೇಲಿನ ಆಕ್ಷೇಪಣೆಗಳನ್ನು ಪರಿಗಣಿಸಿ, ಕರ್ನಾಟಕ ಸರ್ಕಾರ ಜಾರಿ ಮಾಡಿದ ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ನೌಕರರಿಗೆ ತತ್ಪರಿಣಾಮವಾದ ಜ್ಯೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ, 2017 ಮತ್ತು ತತ್ಸಂಬಂಧವಾಗಿ ರಾಜ್ಯ ಸರ್ಕಾರವು ಹೊರಡಿಸಿದ್ದ ಆದೇಶ / ಸುತ್ತೋಲೆಗಳ ಆಧಾರದ ಮೇಲೆ ಪರಿಶೀಲಿಸಲಾಯಿತು.

3. ಅದರಂತೆ, ಈ ಹಿಂದೆ ಪ್ರಕಟಿಸಿದ್ದ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯನ್ನು ಅಧಿನಿಯಮ 2017ರ ಅನ್ವಯ ಪುನರ್ ಪರಿಶೀಲಿಸಿ, ಅಧಿನಿಯಮದ ಅಂಶಗಳಲ್ಲಿ ವಿಷಯಾಂತರ / ಕೊರತೆ ಉಂಟಾದಲ್ಲಿ ಅವುಗಳನ್ನು ಅಧಿನಿಯಮದಂತೆ ಸರಿಪಡಿಸಿ ಸೂಕ್ತ ತಿದ್ದುಪಡಿ / ಮಾರ್ಪಾಡುಗಳೊಂದಿಗೆ ಜ್ಯೇಷ್ಠತಾ ಪಟ್ಟಿಯನ್ನು ಪುನರ್ ರಚಿಸಲಾಗಿರುತ್ತದೆ. ಅಲ್ಲದೇ, ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯಲ್ಲಿನ ವಾಸ್ತವಿಕ ತಪ್ಪುಗಳನ್ನು ಸಹ ಸರಿಪಡಿಸಲಾಗಿರುತ್ತದೆ. ಈ ಕ್ರಮದಿಂದಾಗಿ ಆಕ್ಷೇಪಣೆ ಸಲ್ಲಿಸಿರುವ ಕೆಲವು ಅಧಿಕಾರಿಗಳ / ಸಿಬ್ಬಂದಿಗಳ ಮತ್ತು ಇತರರ ಸ್ಥಾನದಲ್ಲಿ ಬದಲಾವಣೆಗಳಾಗಿರುತ್ತದೆ.

4. ಉಳಿದಂತೆ, ಮೇಲಿನ ಆಕ್ಷೇಪಣೆಗಳಲ್ಲಿ ನಮೂದಿಸಿರುವ ಅಂಶಗಳು ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ನೌಕರರಿಗೆ ತತ್ಪರಿಣಾಮವಾದ ಜ್ಯೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ, 2017ರ ಪರಿಮಿತಿಯಲ್ಲಿ ಇಲ್ಲದ ಕಾರಣ ಮತ್ತು ಅಧಿನಿಯಮದಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳಲು ಯಾವುದೇ ಅವಕಾಶವಿಲ್ಲದ ಕಾರಣ ಅಂತಹ ಆಕ್ಷೇಪಣೆಗಳ ಬಗ್ಗೆ ಯಾವುದೇ ಕ್ರಮ ಕೈಗೊಳ್ಳಲಾಗಿರುವುದಿಲ್ಲ. ಹಾಗಾಗಿ, ಪಟ್ಟಿಯ ಪುನರ್ ಪರಿಶೀಲನೆ ಮತ್ತು ಪುನರ್ ರಚನೆಯು ಅಧಿನಿಯಮ 2017ಕ್ಕೆ ಮಿತಿಗೊಳಿಸಲಾಗಿರುತ್ತದೆ.

5. ಅದರಂತೆ, ನಿಗಮದ ವಿವಿಧ ವೃಂದಗಳ ಪರಿಷ್ಕೃತ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯನ್ನು ಈ ಕೆಳಗಿನಂತೆ ಇದರೊಂದಿಗೆ ಪ್ರಕಟಿಸಲಾಗಿದೆ:

| ವೃಂದ | ಅನುಬಂಧ ಸಂಖ್ಯೆ | ವೃಂದ | ಅನುಬಂಧ ಸಂಖ್ಯೆ |
|---|---|---|---|
| ಕಾರ್ಯನಿರ್ವಹಕ ನಿರ್ದೇಶಕರು | II-Z | ಹಿರಿಯ ಶೀಘ್ರಲಿಪಿಗಾರರು | II-M |
| ಪ್ರಧಾನ ವ್ಯವಸ್ಥಾಪಕರು | II-Y | ಶೀಘ್ರಲಿಪಿಗಾರರು | II-L |
| ಉಪ ಪ್ರಧಾನ ವ್ಯವಸ್ಥಾಪಕರು | II-X | ಹಿರಿಯ ಬೆರಳಚ್ಚುಗಾರರು (ಆ.ಶ್ರೇ) | II-K |
| ಸಹಾಯಕ ಪ್ರಧಾನ ವ್ಯವಸ್ಥಾಪಕರು | II-W | ಹಿರಿಯ ಬೆರಳಚ್ಚುಗಾರರು | II-J |
| ವ್ಯವಸ್ಥಾಪಕರು | II-V | ಬೆರಳಚ್ಚುಗಾರರು | II-I |
| ಉಪ ವ್ಯವಸ್ಥಾಪಕರು | II-U | ಹಿರಿಯ ಸ್ವಾಗತಗಾರರು (ಆ.ಶ್ರೇ) | II-H |
| ಸಹಾಯಕ ವ್ಯವಸ್ಥಾಪಕರು | II-T | ಹಿರಿಯ ಸ್ವಾಗತಗಾರರು | II-G |
| ಹಿರಿಯ ಸಹಾಯಕರು (ಆ.ಶ್ರೇ) | II-S | ಸ್ವಾಗತಗಾರರು | II-E |
| ಹಿರಿಯ ಸಹಾಯಕರು | II-R | ಹಿರಿಯ ಚಾಲಕರು | II-E |
| ಸಹಾಯಕರು | II-Q | ಚಾಲಕರು | II-D |
| ಕಿರಿಯ ಸಹಾಯಕರು (ಆ.ಶ್ರೇ) | II-P | ಹಿರಿಯ ದಫೇದಾರರು | II-C |
| ಕಿರಿಯ ಸಹಾಯಕರು | II-O | ದಫೇದಾರರು | II-B |
| ಹಿರಿಯ ಶೀಘ್ರಲಿಪಿಗಾರರು (ಆ.ಶ್ರೇ) | II-N | ಪರಿಚಾರಕರು | II-A |

6. ಇದರೊಂದಿಗೆ, ಈ ಹಿಂದೆ ದಿನಾಂಕ 6.1.2020ರ ಕಛೇರಿ ಆದೇಶದ ಮೂಲಕ ಪ್ರಕಟಿಸಲಾಗಿದ್ದ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯನ್ನು ಹಿಂಪಡೆಯಲಾಗಿರುತ್ತದೆ.

7. ಮೇಲ್ಕಂಡ ಅನುಬಂಧ II-Z ರಿಂದ II-A ರ ಜ್ಯೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ, ಬಾದಿತ ನೌಕರರುಗಳಿಂದ/ಅಧಿಕಾರಿಗಳಿಂದ ಆಕ್ಷೇಪಣೆಗಳು / ಸಲಹೆಗಳು / ಅಹವಾಲುಗಳು ಸಲ್ಲಿಸುವುದ್ದಿದ್ದರೆ, ಈ ಅದೇಶವನ್ನು ಪ್ರಕಟಿಸಿದ ದಿನಾಂಕದಿಂದ 15 ದಿನದೊಳಗಾಗಿ ಸಲ್ಲಿಸುವ ಕಾಲಾವಕಾಶವನ್ನು ನೀಡಲಾಗಿರುತ್ತದೆ. 15 ದಿನಗಳ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

8. ಆಕ್ಷೇಪಣೆಗಳನ್ನು ಸೂಕ್ತ ಮಾಹಿತಿಯೊಂದಿಗೆ ವ್ಯವಸ್ಥಾಪಕ ನಿರ್ದೇಶಕರವರಿಗೆ ಸಲ್ಲಿಸಲು ಸೂಚಿಸಲಾಗಿದೆ. ಆಂತಹ ಅಕ್ಷೇಪಣೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಕಾನೂನು ರೀತಿಯಲ್ಲಿ ಸೂಕ್ತವಾದ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಸದರಿ ಪರಿಷ್ಕೃತ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯನ್ನು ಸೂಚನಾ ಫಲಕದ ಮೇಲೆ ಮತ್ತು ನಿಗಮದ ಜಾಲತಾಣ (website: www.ksiidc.com) ದಲ್ಲಿ ಪ್ರಕಟಿಸಲಾಗಿರುತ್ತದೆ.

(ಎಂ ಎಸ್ ಶ್ರೀಕರ್)
ವ್ಯವಸ್ಥಾಪಕ ನಿರ್ದೇಶಕರು

ಅಡಕ: ಆನುಬಂಧ – II-Z ರಿಂದ II-A.